

# ನೀವು ಕಾಣಲಾಗದ ಗೋಡೆಗಳಾಚೆ

## ಪೂರ್ವಗ್ರಹದ ಸ್ಥಾನದಲ್ಲಿ ಮುಕ್ತತೆ ಬಂದಾಗ

ದಾಜಿ

ಷಹಜಹಾನ್‌ಪುರ ಯೋಗಾಶ್ರಮದ

ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನೀಡಿದ ಸಂದೇಶ

ತಂಡ 5: ಫೆಬ್ರವರಿ 28 ರಿಂದ ಮಾರ್ಚ್ 2, 2026

# ನೀವು ಕಾಣಲಾಗದ ಗೋಡೆಗಳಾಚೆ

## ಪೂರ್ವಗ್ರಹದ ಸ್ಥಾನದಲ್ಲಿ ಮುಕ್ತತೆ ಬಂದಾಗ

ಪ್ರಿಯ ಸ್ನೇಹಿತರೆ,

ಒಬ್ಬನಿಗೆ ಮನೆಯೊಂದು ಆನುವಂಶಿಕವಾಗಿ ಸಿಕ್ಕಿದ್ದು, ಅಲ್ಲಿನ ಪ್ರತಿಯೊಂದು ಗೋಡೆಗೂ ಬಣ್ಣದ ಗಾಜಿನ ಕಿಟಕಿಗಳಿದ್ದವು, ಮತ್ತು ಒಂದೊಂದು ಗಾಜಿನ ಹಲಗೆಯೂ ಬಾಹ್ಯ ಜಗತ್ತನ್ನು ಒಂದೇ ಬಣ್ಣದಲ್ಲಿ ತೋರಿಸುತ್ತಿತ್ತು. ನೀಲಿ ಗಾಜಿನ ಮೂಲಕ ಉದ್ಯಾನವನ ವಿಷಣ್ಣಕರವಾಗಿ ಕಾಣುತ್ತಿತ್ತು. ಕೆಂಪು ಗಾಜಿನ ಮೂಲಕ ನೋಡಿದಾಗ ಭೀತಿಯನ್ನುಂಟುಮಾಡುತ್ತಿತ್ತು. ಹಳದಿ ಗಾಜಿನ ಮೂಲಕ ಹಳೆಯದಾಗಿ, ಮಾಸಿದಂತೆ ಕಾಣುತ್ತಿತ್ತು. ಆತ ಈ ಕಿಟಕಿಗಳೊಂದಿಗೆ ಎಷ್ಟು ಕಾಲ ಬದುಕಿದ್ದಾನೆಂದರೆ, ಅವು ವರ್ಣಮಯವಾಗಿರುವುದನ್ನೇ ಆತ ಮರೆತುಬಿಟ್ಟಿದ್ದಾನೆ. ಜಗತ್ತು ತಾನು ನೋಡುವಂತೆಯೆ ಇದೆಯೆಂದು ಆತ ನಂಬಿದ್ದಾನೆ. ಮಳೆಗಾಲದ ಒಂದು ಸಂಜೆ, ಬಿರುಗಾಳಿಯಿಂದ ಒಂದು ಗಾಜು ಒಡೆದಾಗ, ಆ ಕಿಂಡಿಯಿಂದ ಆತ ಹೆಸರಿಸಲಾಗದ ಬಣ್ಣಗಳನ್ನು ನೋಡುತ್ತಾನೆ.

ನಮ್ಮಲ್ಲಿ ಬಹುತೇಕರು ಆ ಮನೆಯಲ್ಲಿ ವಾಸಿಸುತ್ತಿದ್ದೇವೆ. ಆನುವಂಶಿಕವಾಗಿ ಪಡೆದ ಬಣ್ಣದ ಗಾಜು, ನಾವು ಹಾಕಿಸಿದ್ದಲ್ಲ. ಕುಟುಂಬ, ಸಂಸ್ಕೃತಿ, ಸಮುದಾಯ ಮತ್ತು ನಮ್ಮದೇ ಅನುಭವಗಳು ಅದನ್ನು ಹಾಕಿವೆ. ಈ ಬಣ್ಣಗಳು ಸ್ವತಃ ಅಪಾಯಕಾರಿಯಲ್ಲ, ಆದರೆ ಗಾಜು ವರ್ಣಮಯವಾಗಿರುವುದನ್ನು ನಾವು ಮರೆತರೆ ಅಪಾಯವಿದೆ. ನಾವು ನಮ್ಮ ಪೂರ್ವಗ್ರಹಗಳ ಮೂಲಕ ನೋಡುತ್ತ, ಎಲ್ಲವನ್ನೂ ಸ್ಪಷ್ಟವಾಗಿ ಕಾಣುತ್ತಿದ್ದೇವೆಂದು ನಂಬುತ್ತೇವೆ. ಪೂರ್ವಗ್ರಹವು ಆಧ್ಯಾತ್ಮಿಕ ಜೀವನಕ್ಕೆ ವಿಷಪ್ರಾಯವೆಂದು ಹೇಳಿದ ಬಾಬೂಜಿಯವರು, ಈ ಸ್ಥಿತಿಯನ್ನು ಅಮೋಘ ನಿಖರತೆಯಿಂದ ಗುರುತಿಸಿದರು.

## ವಿವೇಕದಂತೆ ಕಾಣುವ ವಿಷ

ವಿಷ ಎನ್ನುವುದು ಕುತೂಹಲಕಾರಿ ಶಬ್ದ. ಅದು, ಜೀವನ ವ್ಯವಸ್ಥೆಯನ್ನು ಪ್ರವೇಶಿಸಿ, ಒಳಗಿಂದಲೇ ಹಾಳುಮಾಡುವ ವಸ್ತು ಎಂಬ ಅರ್ಥ ಕೊಡುತ್ತದೆ. ಹಾನಿಯಾಗುವವರೆಗೂ, ವಿಷಪೂರಿತ ದೇಹಕ್ಕೆ ತನಗೆ ವಿಷ ನೀಡಲಾಗಿದೆಯೆಂದು ತಿಳಿಯುವುದೇ ಇಲ್ಲ. ಪೂರ್ವಗ್ರಹವನ್ನು ಇದುವರೆಗೆ ನಾವು ಕಂಡ ಅಡ್ಡಿಗಳಿಗಿಂತ ಹೆಚ್ಚು ಅಪಾಯಕಾರಿಯನ್ನಾಗಿ ಮಾಡಲು ಇದೇ ಕಾರಣ. *ಉದ್ದೇಶದ ಜಾಗೃತಿ*ಯಲ್ಲಿ ಆಲಸ್ಯ ಗೋಚರವಾಯಿತು. *ಭದ್ರ ಬುನಾದಿಯ ನಿರ್ಮಾಣ*ದಲ್ಲಿ ಸಂಶಯ ಅನುಭವಕ್ಕೆ ಬಂದಿತು. *ಆಕಾಶಕ್ಕೆ ಏಣಿ*ಯಲ್ಲಿ, ಪ್ರಾಮಾಣಿಕವಾಗಿ ನೋಡುವ ಎಲ್ಲರೂ ಅಭಿಮಾನವನ್ನು ಗುರುತಿಸಬಲ್ಲವರಾದರು. ಆದರೆ ಪೂರ್ವಗ್ರಹ? ಅದು ವಿವೇಚನೆಯಂತೆ ಕಾಣುವ ನಿಲುವಂಗಿಯನ್ನು ಧರಿಸುತ್ತದೆ. ಸತ್ಯಕ್ಕೆ ನಿಷ್ಠೆಯಂತೆ, ಅನುಭವದ ಮೂಲಕ ಪಡೆದ ವಿವೇಕದಂತೆ ಹಾಗು ಸರಿಯಾಗಿ ನಿರ್ಣಯಿಸುವ ಪ್ರೌಢ ಸಾಮರ್ಥ್ಯದಂತೆ ಅದು ತನ್ನನ್ನು ತೋರ್ಪಡಿಸುತ್ತದೆ. ಪೂರ್ವಗ್ರಹಪೀಡಿತ ಮನಸ್ಸು ರೋಗಿಯಂತೆ ಕಾಣುವುದಿಲ್ಲ; ಅದು ಸುನಿಶ್ಚಿತವಾಗಿರುತ್ತದೆ.

ಅಮೆರಿಕಾದ ಶ್ರೇಷ್ಠ ಶಿಕ್ಷಣತಜ್ಞರಾದ ಜಾನ್ ಡ್ಯೂಯಿರವರು, ಸಂಕುಚಿತ ಮನಃಸ್ಥಿತಿಯನ್ನು "ಅಕಾಲಿಕ ಬೌದ್ಧಿಕ ವೃದ್ಧಾಪ್ಯ" ಎಂದು ಕರೆದರು. ಮನಸ್ಸು ತನ್ನ ಮೃದುತ್ವವನ್ನು ಕಳೆದುಕೊಳ್ಳುತ್ತದೆ. ನಿಜವಾಗಲೂ ಹೊಸತಾದುದೇನನ್ನೂ ಸ್ವೀಕರಿಸಲು, ಪರಾಮರ್ಶಿಸಲು ಅಥವಾ ಸ್ಪಂದಿಸಲು ಅದಕ್ಕೆ ಸಾಧ್ಯವಾಗದು. ಈಗಾಗಲೇ ಇರುವ ಚೌಕಟ್ಟಿಗೆ ಹೊಂದಿಕೊಳ್ಳದ ಪ್ರತಿ ಹೊಸ ಮನುಷ್ಯ, ಪ್ರತಿ ಅಪರಿಚಿತ ಕಲ್ಪನೆ ಅಥವಾ ಅನುಭವವನ್ನೂ ಎಂದೋ ರೂಪುಗೊಂಡ ನಿರ್ಧಾರಗಳ ಶೋಧಕಗಳ ಮೂಲಕ ನೋಡಲಾಗುತ್ತದೆ. ನಾವು ಸತ್ಯವನ್ನು ಎದುರಿಸುವ ಬದಲು, ಸತ್ಯದ ಬಗ್ಗೆ ನಮ್ಮ ಅನಿಸಿಕೆಗಳನ್ನು ಕಾಣುತ್ತೇವೆ. ಇದರಿಂದ ಎರಡನ್ನೂ ತಪ್ಪಾಗಿ ಅರ್ಥೈಸಿಕೊಳ್ಳುತ್ತೇವೆ.

## ಅದು ಬಲಗೊಳಿಸುವ ಸಂಕಲೆ

ಬಾಬೂಜಿಯವರ ಒಳನೋಟವು ಮನೋವಿಜ್ಞಾನಕ್ಕಿಂತಲೂ ಆಳವಾಗಿ ವಿಶ್ಲೇಷಿಸುತ್ತದೆ; ಅವರು ಪಾರಭೌತಿಕ (ಅತೀಂದ್ರಿಯ) ಸಿದ್ಧಾಂತ (metaphysical) ಪರಿಣಾಮವನ್ನು ಗುರುತಿಸುತ್ತಾರೆ. ಅವರೆನ್ನುತ್ತಾರೆ, ಪೂರ್ವಗ್ರಹವು ಈಗಾಗಲೆ ಇರುವ ಅಹಂಕಾರದ ಸಂಕಲೆಯಲ್ಲಿ ಮತ್ತೊಂದು ಕೊಂಡಿಯನ್ನು ಜೋಡಿಸುತ್ತದೆ. ಇದರರ್ಥವೇನೆಂದು

ನೋಡೋಣ. ಮೂಲತಃ, ಪ್ರತಿಯೊಂದು ಪೂರ್ವಗ್ರಹಪೀಡಿತ ಕರ್ಮವೂ, ಒಂದು ಘೋಷಣೆ: ನನ್ನ ದೃಷ್ಟಿಯೆ ಸರಿಯಾದ ದೃಷ್ಟಿ. ನನ್ನ ಗುಂಪೇ ಸರಿಯಾದ ಗುಂಪು. ನಾನು ನೋಡುವ ರೀತಿಯೆ ಸರಿಯಾದ ರೀತಿ. ಅದು ಇತರರ ಬಗ್ಗೆ ನಿರ್ಣಾಯಕವಾಗಿ ಕಂಡರೂ, ಮೂಲತಃ ಅದು ನಮ್ಮ ಬಗೆಗಿನ ಹೇಳಿಕೆಯಷ್ಟೆ. ಅಲ್ಲದೆ, ಪ್ರತಿಯೊಂದು ಹೇಳಿಕೆಯೂ, ತಾನು ಮರಳಿ ವಿಲೀನಗೊಳ್ಳುವೆನೆಂಬ ಹಂಬಲವಿರುವ ಪ್ರತ್ಯೇಕ ಬಿಂದುವನ್ನು, ಸಿಂಧುವಿನಿಂದ ಪ್ರತ್ಯೇಕಿಸುವ ಅಹಂಕಾರದ ಕೋಶವನ್ನು ದಪ್ಪವಾಗಿಸುತ್ತದೆ.

ಆದ್ದರಿಂದಲೆ ಬಾಬೂಜಿಯವರು ಇಂತಹ ಬೆಚ್ಚಿಬೀಳಿಸುವಂಥ ತರ್ಕಕ್ಕೆ ಬರುತ್ತಾರೆ: ಅಸೀಮದ ಸಾಕ್ಷಾತ್ಕಾರ ಅಸಾಧ್ಯತೆಯಾಗುತ್ತದೆ. ಅದು ಕಠಿಣ ಅಥವಾ ಅಸಂಭವವಾಗುವುದಿಲ್ಲ; ಅದು ಅಸಾಧ್ಯತೆಯೆ ಆಗುತ್ತದೆ. ಸೀಮಿತ ಗೋಡೆಗಳನ್ನು ನಿರ್ಮಿಸುತ್ತ ನೀವು ಅನಂತವನ್ನು ತಲುಪಲಾರಿರಿ. ಪ್ರತ್ಯೇಕವಾಗಿರಬೇಕೆಂದು ಒತ್ತಾಯಿಸುತ್ತ ನೀವು ಪೂರ್ಣತೆಯೊಂದಿಗೆ ವಿಲೀನಗೊಳ್ಳಲಾರಿರಿ. ತನ್ನ ಸುತ್ತಲೂ ಎಲ್ಲೆಯನ್ನು ನಿರ್ಮಿಸಿರುವ ಹಾಗು ಆ ಎಲ್ಲೆಯಾಚೆಗಿನ ಎಲ್ಲವೂ ಕನಿಷ್ಠ ಅಥವಾ ತಪ್ಪು ಎನ್ನುವ ಪ್ರಜ್ಞೆಯು, ಮೂಲಭೂತವಾಗಿ ತನ್ನನ್ನು ತಾನು ವಿಸ್ತಾರದ ಅನುಭವದಿಂದ ಅನರ್ಹಗೊಳಿಸಿಕೊಳ್ಳುತ್ತದೆ. ಇದು ಸಂಪೂರ್ಣ ತರ್ಕಬದ್ಧ.

## ಗೋಡೆಯಾದ ಸೇತುವೆ.

ಬಾಬೂಜಿಯವರ ವಿಶ್ಲೇಷಣೆಯಲ್ಲಿನ ಅತಿ ಗಂಭೀರ ಆಯಾಮವೆಂದರೆ, ಪೂರ್ವಗ್ರಹದ ಪ್ರಭಾವದಿಂದ ಮತಧರ್ಮಕ್ಕೆ ಏನಾಗುತ್ತದೆ ಎಂಬುದು. ಮಾನವ ಹಾಗು ದೈವದ ನಡುವೆ ಸೇತುವೆಯಾಗಿ ವಿನ್ಯಾಸಗೊಂಡ ಮತಧರ್ಮವು, ತಡೆಗೋಡೆಯಾಗಿ ಬದಲಾಗುತ್ತದೆ.



ನೀವು ಅನಂತವನ್ನು ತಲುಪಲಾರಿರಿ. ಪ್ರತ್ಯೇಕವಾಗಿರಬೇಕೆಂದು ಒತ್ತಾಯಿಸುತ್ತ ನೀವು ಪೂರ್ಣತೆಯೊಂದಿಗೆ ವಿಲೀನಗೊಳ್ಳಲಾರಿರಿ. ತನ್ನ ಸುತ್ತಲೂ ಎಲ್ಲೆಯನ್ನು ನಿರ್ಮಿಸಿರುವ ಹಾಗು ಆ ಎಲ್ಲೆಯಾಚೆಗಿನ ಎಲ್ಲವೂ ಕನಿಷ್ಠ ಅಥವಾ ತಪ್ಪು ಎನ್ನುವ ಪ್ರಜ್ಞೆಯು, ಮೂಲಭೂತವಾಗಿ ತನ್ನನ್ನು ತಾನು ವಿಸ್ತಾರದ ಅನುಭವದಿಂದ ಅನರ್ಹಗೊಳಿಸಿಕೊಳ್ಳುತ್ತದೆ. ಇದು ಸಂಪೂರ್ಣ ತರ್ಕಬದ್ಧ.

ಸಂಪರ್ಕದ ಸಾಧನವೇ ಪ್ರತ್ಯೇಕತೆಯ ಸಾಧನವಾಗಿಬಿಡುತ್ತದೆ. ಹೇಗೆ? ಪವಿತ್ರವಾದುದನ್ನು ನಾವು "ನನ್ನ ಧರ್ಮವೇ ಏಕೈಕ ನಿಜವಾದ ಧರ್ಮ" ಎಂಬ ಮಸೂರದ ಮೂಲಕ ನೋಡಿದಾಗ, ದೈವದ ಜೀವಂತ ಅನುಭವದ ಸ್ಥಳದಲ್ಲಿ, ಆಕಾರದೆಡೆಗಿನ ಮೃತ ನಿಷ್ಠೆಯನ್ನು ಕುಳ್ಳಿರಿಸುತ್ತೇವೆ. ಪಾತ್ರೆಯನ್ನು ಆರಾಧಿಸುವ ನಾವು, ಅದರಲ್ಲಿ ತುಂಬಬೇಕಾಗಿದ್ದ ನೀರನ್ನು ಮರೆಯುತ್ತೇವೆ.

ಇದು, ಯಾವುದೇ ಒಂದು ಸಂಪ್ರದಾಯಕ್ಕೆ ಸೀಮಿತವಾದ ಸಮಸ್ಯೆಯಲ್ಲ. ಚಂದ್ರನೆಡೆಗೆ ಕೈತೋರಿಸುವುದನ್ನೇ ಚಂದ್ರನೆಂದು ತಪ್ಪುತಿಳಿಯುವ ಮನುಷ್ಯರಿರುವ ಕಡೆಯೆಲ್ಲ ಇದಿರುತ್ತದೆ. ಧ್ಯಾನಮಾಡಲು ಮುಸಲ್ಮಾನನ ಪಕ್ಕ ಕುಳಿತುಕೊಳ್ಳದ ಹಿಂದೂ ಇರುವಲ್ಲಿ ಇರುತ್ತದೆ. ಎಲ್ಲ ಆಧ್ಯಾತ್ಮಿಕ ಅನುಭವಗಳನ್ನು ಭ್ರಮೆಯೆಂದು ತಳ್ಳಿಹಾಕುವ ವಿಜ್ಞಾನಿಯಲ್ಲಿರುತ್ತದೆ. ನಾವು ಕಟ್ಟಾ ಪ್ರಾಮಾಣಿಕರಾಗಿದ್ದರೆ, ಅದು ನಮ್ಮಲ್ಲಿಯೂ, ನಾವು ಪರೀಕ್ಷಿಸದ ಮೂಲೆಯಲ್ಲೆಲ್ಲೊ, ನಾವು ಊಹೆಗಳೆಂಬುದನ್ನೇ ಮರೆತಿರುವ ಅತಿ ಪರಿಚಿತ ಕಲ್ಪನೆಗಳಲ್ಲೆಲ್ಲೊ, ಮೌನವಾಗಿ ನೆಲೆಗೊಂಡಿರುವ ಸಾಧ್ಯತೆಯಿದೆ.

## ಯಾವುದು ಗಾಜನ್ನು ಕರಗಿಸುತ್ತದೆ

ಖಾಲಿ ಬಟ್ಟಲಿಗೆ ಹೇಗೆ ತುಂಬಿಕೊಳ್ಳುವ ಸಾಮರ್ಥ್ಯವಿದೆಯೊ, ಖಾಲಿ ಹೃದಯದಲ್ಲಿ ಪ್ರೇಮಕ್ಕೆ ಸ್ಥಳಾವಕಾಶವಿದೆ. ಪ್ರೇಮವೆಂದರೆ ನಾವು ಉತ್ಪತ್ತಿ ಮಾಡುವಂಥದ್ದಲ್ಲ; ಅದು, ಪರಿಸ್ಥಿತಿ ಸೂಕ್ತವಾಗಿದ್ದಾಗ ಉದ್ಭವಿಸುವಂಥದ್ದು. ಪ್ರೇಮದ ಪ್ರವೇಶಕ್ಕೆ ಸ್ಥಳಾವಕಾಶ ಮಾಡುವಲ್ಲಿ, ಪೂರ್ವಗ್ರಹವು ಕೀಳಬೇಕಾದ ಆಳವಾದ ಬೇರುಗಳಲ್ಲೊಂದು. ಆದಾಗ್ಯೂ, ಅದರ ವೈರುಧ್ಯವೂ ಅಷ್ಟೇ ಸುಂದರವಾದುದು: ಪೂರ್ವಗ್ರಹವನ್ನು ಒಳಗಿನಿಂದಲೇ ಕರಗಿಸುವ ಬಲವೇ ಪ್ರೇಮ. ಪ್ರೇಮ ವಿಸ್ತಾರಗೊಂಡಾಗ, ಭಯ ಸಂಕೋಚಗೊಳ್ಳುತ್ತದೆ. ಒಂದು ನಿಶ್ಚಿತ ಸ್ಥಿತಿಯ ಸುತ್ತಲೂ ಪ್ರಜ್ಞೆಯ ಸಂಕೋಚನವೆ ಆದ ಪೂರ್ವಗ್ರಹವು ನಿಜವಾದ ವಿಕಸನವನ್ನು ತಡೆದುಕೊಳ್ಳಲಾರದು.

ಧ್ಯಾನ ಅನಿವಾರ್ಯವಾಗುವುದು ಇಲ್ಲಿಯೆ. ನೀವು ಎಲ್ಲರನ್ನೂ ಪ್ರೀತಿಸುವಿರೆಂದು ಸಮರ್ಥಿಸಲಾರಿರಿ, ಅಥವಾ ಮುಕ್ತತೆಗೆ ತೆರೆದುಕೊಂಡಿರೆಂದು ಲಜ್ಜಿತರಾಗಲಾರಿರಿ. ಆಳವಾದ ಅಭ್ಯಾಸದ ಮೌನದಲ್ಲಿ, ವಿಚಾರ ಸ್ಥಿರಗೊಂಡು ಬಡಬಡಿಸುವ ಮನ ಶಾಂತವಾದಾಗ, ಅದ್ಭುತವೊಂದು ಸಂಭವಿಸುತ್ತದೆ. ನಾವು ಕಟ್ಟಿಕೊಂಡ ಎಲ್ಲೆಗಳು ನಮ್ಮದೇ ನಿರ್ಮಿತಿಗಳೆಂದು

ಅನ್ನಿಸಲಾರಂಭಿಸುತ್ತವೆ. ಈ ಎಲ್ಲೆಗಳು ವಾಸ್ತವವೂ ಅಲ್ಲ, ನಿಜವೂ ಅಲ್ಲ; ಅವು ಕೇವಲ ಮನಸ್ಸಿನ ರೂಢಿಗಳು, ಪ್ರತಿಕ್ರಿಯೆಯ ವಿನ್ಯಾಸಗಳು, ಹಾಗು ನಾವೆಂದಿಗೂ ಪ್ರಶ್ನಿಸುತ್ತೇವೆಂದು ಯೋಚಿಸದ ಆನುವಂಶೀಯ ನಿರ್ಧಾರಗಳು.

ದೈವಿಕ ಪ್ರಾಣಾಹುತಿಯ ಮೂಲಕ, ಮನಸ್ಸಿನ ವಿಭಾಗಗಳಿಗಿಂತ ವಿಶಾಲವಾದುದರೊಂದಿಗಿನ ನೇರ ಸಂಪರ್ಕದಿಂದ ಹೃದಯ ಮೆದುವಾಗುತ್ತದೆ. ಆ ವೈಶಾಲ್ಯದಲ್ಲಿ ಪೂರ್ವಗ್ರಹಕ್ಕೆ ಸ್ಥಳವೇ ಇಲ್ಲ; ಅದಕ್ಕೆ ಕಾರಣ ನಾವದನ್ನು ಸೆಣೆಸಿ ದೂರ ಓಡಿಸಿದೆವೆಂದಲ್ಲ; ನಾವು, ಅದು ಒಂದೊಮ್ಮೆ ಆಕ್ರಮಿಸಿದ ಸ್ಥಳದಿಂದಾಚೆ ವಿಕಸನಗೊಂಡಿರುವುದರಿಂದ. ಸಾಗರವನ್ನು ತಲುಪಿದ ನದಿ ತಾನು ಹರಿದುಬಂದ ಕಣಿವೆಯ ಬಗ್ಗೆ ಚಿಂತಿಸದು; ಏಕೆಂದರೆ ಅದೀಗ ಅಂತಹ ಚಿಕ್ಕ ಪುಟ್ಟ ನಂಬಿಕೆಗಳಿಂದಾಚೆ ಬೃಹತ್ತಾಗಿ ಬೆಳೆದಿದೆ.

## ಗಾಜಿನೊಳಗಿನ ಬಿರುಕು

ಪೂರ್ವಗ್ರಹವು ತನ್ನನ್ನು ಅಂಟಿಸಿಕೊಂಡವನಿಗೆ ಹಾನಿ ಮಾಡುವುದಷ್ಟೇ ಅಲ್ಲದೆ, ಹೊರಗೂ ಪಸರಿಸುತ್ತದೆ. ಅದು ಬೇರೆಯವರಿಗೆ ಅನುಭವವಾಗುತ್ತದೆ, ಮಕ್ಕಳು ಗ್ರಹಿಸುತ್ತಾರೆ ಹಾಗು ಸಮುದಾಯಗಳು ಅದರ ಅಗೋಚರ ರೇಖೆಗಳ ಸುತ್ತ ಒಡೆಯುತ್ತವೆ. ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತಿದೆಯಾದರೂ, ಆತ್ಮದ ಸ್ವಾತಂತ್ರ್ಯ ದೊರೆತಿಲ್ಲವೆಂದು ಬಾಬೂಜಿಯವರು ಬರೆದಾಗ, ಅವರು ಕಾಲಾತೀತ ಅಂಶವೊಂದನ್ನು ಗುರುತಿಸಿದ್ದರು: ಆಂತರಿಕ ಮುಕ್ತಿಯ ವಿನಾ ಬಾಹ್ಯ ಮುಕ್ತಿಯು ಅಪೂರ್ಣ.

ನಮ್ಮ ಸ್ವಂತ ಆಂತರಿಕ ಪರಿಸರವನ್ನು ಪರೀಕ್ಷಿಸುವ ಹೊಣೆಗಾರಿಕೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ. ನಮ್ಮನ್ನು ನಾವು ಪಾಪಪ್ರಜ್ಞೆಯಿಂದ ಪರೀಕ್ಷಿಸುವ ಅಗತ್ಯವಿಲ್ಲ, ಏಕೆಂದರೆ ಪಾಪಪ್ರಜ್ಞೆ



ದೈವಿಕ ಪ್ರಾಣಾಹುತಿಯ ಮೂಲಕ, ಮನಸ್ಸಿನ ವಿಭಾಗಗಳಿಗಿಂತ ವಿಶಾಲವಾದುದರೊಂದಿಗಿನ ನೇರ ಸಂಪರ್ಕದಿಂದ ಹೃದಯ ಮೆದುವಾಗುತ್ತದೆ. ಆ ವೈಶಾಲ್ಯದಲ್ಲಿ ಪೂರ್ವಗ್ರಹಕ್ಕೆ ಸ್ಥಳವೇ ಇಲ್ಲ; ಅದಕ್ಕೆ ಕಾರಣ ನಾವದನ್ನು ಸೆಣೆಸಿ ದೂರ ಓಡಿಸಿದೆವೆಂದಲ್ಲ; ನಾವು, ಅದು ಒಂದೊಮ್ಮೆ ಆಕ್ರಮಿಸಿದ ಸ್ಥಳದಿಂದಾಚೆ ವಿಕಸನಗೊಂಡಿರುವುದರಿಂದ.

ಮತ್ತೊಂದು ಬಗೆಯ ಸಂಕೋಚನ. ಅದರ ಬದಲು, ಪ್ರಾಮಾಣಿಕ ಕುತೂಹಲದಿಂದ ಪರಾಮರ್ಶಿಸಲೆತ್ನಿಸಿ: "ನಾನೆಂದು ಆಲಿಸುವುದನ್ನು ನಿಲ್ಲಿಸಿದೆ?" "ಹೊಸ ಪ್ರಮಾಣವಿಲ್ಲದೆ, ಒಬ್ಬ ವ್ಯಕ್ತಿ, ಮಾರ್ಗ ಅಥವಾ ಪರಿಕಲ್ಪನೆಯು ನನಗೇನೂ ನೀಡಲಾಗದೆಂದು ನಾನೆಲ್ಲಿ ನಿರ್ಧರಿಸಿದೆ?" "ನಾನು ಯಾವಾಗ ನಿಶ್ಚಿತತೆಯ ಆರಾಮವನ್ನು ಸತ್ಯದ ಉಪಸ್ಥಿತಿಯೆಂದುಕೊಳ್ಳುವ ಗೊಂದಲಕ್ಕೊಳಗಾದೆ?"


ಪಿತ್ರಾರ್ಜಿತವಾಗಿ ಪಡೆದ ಮನೆಯಲ್ಲಿರುವ ಆ ಮನುಷ್ಯನು ಅದರ ಕಿಟಕಿಗಳನ್ನು ಮುರಿಯಲಿಲ್ಲ. ಆತನಿಗೆ ಒಂದೇ ಬಿರುಕಿನ, ಅಶೋಧಿತ ಬೆಳಕು ಬರಬಲ್ಲ ಚಿಕ್ಕದೊಂದು ಕಿಂಡಿಯ ಅಗತ್ಯವಿತ್ತು. ಈ ಬಿರುಕು, ಆಧ್ಯಾತ್ಮಿಕ ಸ್ವಾತಂತ್ರ್ಯದ ಆರಂಭ: ಅದು ಹೆಚ್ಚು ಸರಿಯುತ್ತರಗಳ ಸಂಗ್ರಹವಲ್ಲ, ಅದು ವಾಸ್ತವದ ವೈಶಾಲ್ಯ ನಮ್ಮನ್ನು ಅಚ್ಚರಿಗೊಳಿಸುತ್ತ, ನಿರಂತರವಾಗಿ ಮರುರೂಪಿಸುವಂತೆ, ನಮ್ಮ ಉತ್ತರಗಳನ್ನು ಹಗುರವಾಗಿರಿಸಿಕೊಳ್ಳುವ ಇಚ್ಛೆಯಾಗಿದೆ.

ನಮಗೆ ಕಾಣದ ಗೋಡೆಗಳನ್ನು ಕೆಡವಲು ಯಾವಾಗಲೂ ಕಷ್ಟ, ಆದರೆ ಈ ಕೆಲಸವನ್ನು ಯೋಗ್ಯವನ್ನಾಗಿ ಮಾಡುವ ಪ್ರಶಾಂತ ಸತ್ಯವೊಂದಿದೆ: ನಾವು ಅವುಗಳನ್ನು ಬಲಪೂರ್ವಕವಾಗಿ ಕೆಡವುದಿಲ್ಲ. ಇನ್ನೂ ಅವುಗಳೊಳಗೆ ಜೀವಿಸಲು ಅಸಾಧ್ಯವಾಗುವಷ್ಟು ಬೃಹತ್ತಾಗಿ ಬೆಳೆಯುವ ಮೂಲಕ ಅವುಗಳನ್ನು ಕರಗಿಸುತ್ತೇವೆ. ಆ ಗೋಡೆಗಳು ಮಾಯವಾಗುತ್ತಿದ್ದಂತೆ, ತೆರವುಗೊಂಡ ಆ ಸ್ಥಳದಲ್ಲಿ ಎಂದಿನಿಂದಲೂ ಕಾಯುತ್ತಿದ್ದ ಸನ್ನಿಧಿಯೊಂದಿದ್ದು, ಹೊಸ ಚಲನೆಯೊಂದು ಆರಂಭವಾಗುತ್ತದೆ. ನಾವಿದನ್ನು ಮುಂದಿನ ಸಂದೇಶದಲ್ಲಿ ಅನ್ವೇಷಿಸೋಣ: ಎಲ್ಲ ಅಡ್ಡಿಗಳಿಂದ ಮುಕ್ತವಾದ ಕ್ಷಣವೇ, ಪ್ರೇಮವು ತನ್ನ ಪೂರ್ಣ ಬಲವನ್ನು ದೈವಿಕತೆಯೆಡೆಗೆ ತಿರುಗಿಸಿ ಭಕ್ತಿಯಾಗುತ್ತದೆ.

ಪ್ರೇಮ ಮತ್ತು ಪ್ರಾರ್ಥನೆಗಳೊಂದಿಗೆ,
ಕಮಲೇಶ್



ಷಹಜಹಾನ್‌ಪುರ ಯೋಗಾಶ್ರಮದ
ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನೀಡಿದ ಸಂದೇಶ
ತಂಡ 5: ಫೆಬ್ರವರಿ 28 ರಿಂದ ಮಾರ್ಚ್ 2, 2026



## ದಾಜಿಯವರೊಂದಿಗೆ ಮಾಸ್ಟರ್‌ಕ್ಲಾಸಸ್

ನೀವು ಹಾರ್ಟ್‌ಫುಲ್‌ನೆಸ್ ಅಭ್ಯಾಸವನ್ನು ಯಾವಾಗಲಾದರೂ ಆರಂಭಿಸಬಹುದು! ಮೂರು ಭಾಗದ ಮಾಸ್ಟರ್‌ಕ್ಲಾಸಸ್ ಸರಣಿಯಲ್ಲಿ ದಾಜಿಯವರ ಜೊತೆಗೂಡಿರಿ. ಇದರಲ್ಲಿ ಅವರು ಹಾರ್ಟ್‌ಫುಲ್‌ನೆಸ್ ಮಾರ್ಗದ ಲಾಭಗಳ ಬಗ್ಗೆ ಹೇಳುತ್ತಾರೆ ಹಾಗು ನಿಮ್ಮ ಪ್ರತಿದಿನದ ದಿನಚರಿಯಲ್ಲಿ ಹಾರ್ಟ್‌ಫುಲ್‌ನೆಸ್ ವಿಶ್ರಾಂತಿವಿಧಾನ, ಧ್ಯಾನ, ಶುದ್ಧೀಕರಣ ಮತ್ತು ಪ್ರಾರ್ಥನೆಯನ್ನು ಹೇಗೆ ಸೇರಿಸಬಹುದು ಎಂದೂ ತಿಳಿಸುತ್ತಾರೆ. ಎಲ್ಲ ಮಾಸ್ಟರ್‌ಕ್ಲಾಸ್‌ಗಳೂ ನಿಃಶುಲ್ಕವಾಗಿವೆ.

https://heartfulness.org/global/masterclass/

## Heartfulness Practices

Discover Heartfulness practices-learn to relax, meditate, clean and pray.

https://heartfulness.org/in-en/heartfulness-practices/

heartfulness

purity weaves destiny

